ಅಂಗಡಿಯ ಹಿಂದೆ ನಿಂತರು. ಸಂತೆಯ ತುಂಬ ಜನದಟ್ಟಣೆ ಇತ್ತು. ಮಲ್ಲಿಗೆ ಹೂವಿನ ಪಕ್ಕದಲ್ಲೇ ಇದ್ದ ಬೆಲ್ಲದಂಗಡಿಯಲ್ಲಿ ನೊಣಗಳು ಜೊಂಯ್ ಎಂದು ಮುತ್ತುತ್ತಿದ್ದವು, ಮತ್ತೆ ಓಡುತ್ತಿದ್ದವು. ಯಾಂತ್ರಿಕವಾಗಿ ಬೆಲ್ಲ ಮಾರುವವನ ಕೈ ಅದರ ಮೇಲೆ ಆಡುತ್ತಿತ್ತು. ಅವ್ವ ನಿನ್ನೆ ಜಯವ್ವನ ಮಾತುಗಳನ್ನು ಅವರ ಎದೆಗಾಕುವ ಸಲುವಾಗಿ, 'ನೀವಿಬ್ರು ಅಲ್ಲಿ ಕಡ್ಲೆಪುರಿ ಕಾಣ್ಸ್ತಿದೆಯಲ್ಲ ಅದ್ನ ತಗೊಂಡು ತಿನ್ರಿ' ಎಂದು ನನ್ನ ಮತ್ತು ಕಮಲಕ್ಕನ ಮಗಳನ್ನು ಕಳುಹಿಸಿದಳು. ನಾವು ಹೋಗಿ ತಗೊಂಡು ತಿಂದು ಬರುವುದರೊಳಗೆ ಅವರ ಮಾತುಗಳು ಮುಗಿದಿದ್ದವು. ಬಂದಾಗ ಕಮಲಕ್ಕ ಎಂದೂ ನೋಡದಿರುವಂತೆ ನನ್ನನ್ನೂ ಮತ್ತು ತನ್ನ ಮಗಳನ್ನು ನೋಡುತ್ತಿದ್ದುದು ನನ್ನ ಅರಿವಿಗೆ ಬಂತು. ಮೂವರ ಮುಖಗಳೂ ಎಣ್ಣೆಯಲ್ಲಿ ಅದ್ದಿದಂತೆ ಮಂಕಾಗಿದ್ದವು. ಕೊನೆಗೆ, 'ನೀ ಚಿಂತೆ ಮಾಡ್ಬೇಡ, ಎಲ್ಲದಕ್ಕೂ ಮೇಲಿನವನೊಬ್ಬ ಇದ್ದಾನಲ್ಲ' ಎಂದು ಸಿದ್ಧಣ್ಣ ಹೇಳಿದನು. ಇದರ ಒಳಾರ್ಥ ಅರ್ಥವಾಗದ ನಾನು ಅವ್ವನ ಮುಖವನ್ನು ನೋಡಿದೆ. ಅವ್ವ ಬಸ್ಸಿನ ಕಡೆಗೆ ಕಣ್ಣನ್ನು ನೆಟ್ಟಳು.

ಕಮಲಕ್ಕನ ಮನೆಯಲ್ಲಿ ಇತ್ತೀಚೆಗೆ ಸಣ್ಣಪುಟ್ಟ ಜಗಳಗಳು ಶುರುವಾದವು. ಅವ್ವನ ಕಿವಿ ಕಣ್ಣೆಲ್ಲ ಆ ಹಿಂಬಾಗಿಲ ಕಡೆಯೇ ಸುತ್ತತೊಡಗಿದವು. ಒಮ್ಮೊಮ್ಮೆ ಕಮಲಕ್ಕ ಅಲ್ಲಿ ಮುಖ ತೋರಿಸಿ ಮತ್ತೆ ಮರೆಯಾಗುತ್ತಿದ್ದಳು. ಮತ್ತೆ ಕೆಲವು ದಿನಗಳಲ್ಲಿ ತಿಳಿಯಾಯಿತು. ಹೊಲದಲ್ಲಿ ಬೆಳೆದಿದ್ದ ಬೆಳೆಗಳು ಮನೆ ಸೇರುತ್ತಿದ್ದವು. ಕೆಲಸ ಎಲ್ಲರನ್ನು ಆವರಿಸಿಕೊಂಡಿತು. ಮತ್ತೆ ಮಲ್ಲಿಗೆ ಹೂವಿನ ತೋಟ ಮೊಗ್ಗು ಕಚ್ಚಿತು. ಬಿಡಿಸಲು ಮತ್ತದೇ ತಂಡ ಅಲ್ಲಿ ನಿಂತಿತು. ಕಮಲಕ್ಕ ಅವ್ವನೂ ಸೇರಿದರು. ಒಂದು ದಿನ ಹೂವಿನ ವ್ಯಾಪಾರಕ್ಕೆ ಹೋಗಿದ್ದ ಸಿದ್ಧಣ್ಣ ವ್ಯಾಪಾರ ಮುಗಿಸಿ ರಾತ್ರಿ ಬಸ್ಸಿಗೆ ಬಂದನು. ಕತ್ತಲು ಗವ್ವೆನ್ನುತ್ತಿತ್ತು. ಇದ್ದಕ್ಕಿದ್ದಂತೆ ಸಿದ್ಧಣ್ಣನ ಮೇಲೆ ಯಾರೋ ಮುಗಿಬಿದ್ದರು. ಹೊಡಿ ಬಡಿ ಎನ್ನುವ ಶಬ್ದಗಳು ಆವರಿಸಿದವು. ಊರಿನಲ್ಲಿ ಒಬ್ಬೊಬ್ಬರಾಗಿ ಈ ಗಲಾಟೆಗೆ ಧ್ವನಿ ಕೊಟ್ಟು ಎದ್ದರು. ಎಲ್ಲರೂ ಸೇರುವ ಹೊತ್ತಿಗೆ ಬಸ್ ಡ್ರೈವರ್ ನರಸಿಂಹಣ್ಣನು ಸಿದ್ಧಣ್ಣನನ್ನು ಬಗಲಲ್ಲಿ ನಿಲ್ಲಿಸಿಕೊಂಡು, 'ಯಾವನ್ರುಲಾ ಅವ್ನು... ಒಬ್ಬನ ಮೇಲೆ ಬಿದ್ದರೋ ಮಹಾ ಗಂಡಸ್ರು' ಎಂದು ಕೂಗುತ್ತಿದ್ದನು. ನಾನು ಅವ್ವನೂ ಎದ್ದು ಕಿಟಕಿಯಲ್ಲಿ ಇಣುಕಿದೆವು. ಊರೆದ್ದು ಸೇರುವುದರೊಳಗೆ ಎಲ್ಲರೂ ಚೆಲ್ಲಾಪಿಲ್ಲಿಯಾಗಿದ್ದರು. ಅದೇ ಹೊತ್ತಿಗೆ ಬಸ್ಸಿನಿಂದ ಇಳಿದು ಅಣ್ಣನೂ ಬಂದನು. ಮೌನವಾಗಿಯೇ ಇದ್ದನು. ಊರು ಗುಂಪು ಸೇರಿ ಗುಜುಗುಟ್ಟಿತು.

ಬೆಳಗ್ಗೆ ಸಿದ್ಧಣ್ಣ ಆಸ್ಪತ್ರೆಗೆ ಹೋಗಿ ಬಂದನು. ಕಮಲಕ್ಕನಿಗೆ ಇದೆಲ್ಲ ಗೊತ್ತಾಗಿ ಒಳಗೊಳಗೇ ಕೊರಗಿದಳು. ಅವ್ವ ಈ ಗಲಾಟೆಯಲ್ಲಿ ಅಣ್ಣನ ಪಾತ್ರವಿದೆಯೆಂದು ಗೊತ್ತಾದ ಮೇಲೆ ನಡುಗಿಹೋದಳು. ಊರಿನ ಹಲವರ ಸಲಹೆ ಮೇರೆಗೆ ಸಿದ್ಧಣ್ಣ ಮತ್ತೊಂದಿಷ್ಟು ದಿನ ಊರು ಬಿಟ್ಟನು. ಇಲ್ಲಿಂದೀಚೆಗೆ ಕಮಲಕ್ಕ ಹೆಚ್ಚು ಸಂಕಟಕ್ಕೆ ಸಿಕ್ಕಿಕೊಂಡವಳಂತೆ ಒದ್ದಾಡುತ್ತಿದ್ದಳು. ಅವಳು ಆಗಾಗ್ಗೆ ಮನೆಗೆ ಬರುತ್ತಿದ್ದುದುದರಿಂದ ಇದೆಲ್ಲ ಗೊತ್ತಾಗುತ್ತಿತ್ತು. ಒಮ್ಮೆಯಂತೂ, 'ಸಿದ್ಧಣ್ಣನ ಜೊತೆಯಲ್ಲೇ ಬದುಕಿಬಿಡುತ್ತೇನೆ' ಎನ್ನುವಂತೆ ಅವ್ವನ ಬಳಿ ಮಾತನಾಡಿಯೂ ಇದ್ದಳು. ಇದು ಈ ಊರಿನಲ್ಲಿ ಆಗದ ಮಾತು ಎನ್ನುವುದು ಇಬ್ಬರಿಗೂ ತಿಳಿದಿತ್ತು. ಸಿದ್ಧಣ್ಣ ಊರು ಬಿಟ್ಟವನು ಎಲ್ಲಿದ್ದಾನೆ ಎನ್ನುವುದು ಮೂರು ತಿಂಗಳುಗಳ ಕಾಲ ಗೊತ್ತೇ ಆಗಲಿಲ್ಲ. ಕಮಲಕ್ಕ ಚಡಪಡಿಸಿ ಹೋದಳು. ಕೊನೆಗೆ ಸಿದ್ಧಣ್ಣ ಬೆಂಗಳೂರಿನ ತನ್ನ ನೆಂಟರ ಮನೆಯಲ್ಲಿದ್ದುಕೊಂಡು ಕೆಲಸಕ್ಕೆ ಹೋಗುತ್ತಿದ್ದಾನೆಂದು ಗೊತ್ತಾಗಿ ಕೊಂಚ ನಿರುಮ್ಮಳಾದಳು.

ಊರಿನ ಆಗುಹೋಗುಗಳ ನಡುವೆ ಕಮಲಕ್ಕನ ವಿಷಯ ಬಂದೂ ಬಂದೂ ಹೋಗುವುದು ತಪ್ಪುತ್ತಿರಲಿಲ್ಲ. ಅಪರಾಧಿ ಎನ್ನುವಂತೆ ಊರಿನ ಕೆಲವರು ನೋಡತೊಡಗಿದರು. ಸಮಯ ಸಿಕ್ಕಾಗ ಮಾತಿನಲ್ಲೇ ಚುಚ್ಚಲು ಶುರುಮಾಡಿದರು. ಎಲ್ಲವನ್ನು ಸಹಿಸಿಕೊಳ್ಳುತ್ತಿದ್ದ ಕಮಲಕ್ಕ, 'ತನ್ನ ಮಕ್ಕಳಿಗಾಗಿ ಎಲ್ಲವನ್ನು ಸಹಿಸಿಕೊಳ್ಳುತ್ತಿದ್ದೇನೆ' ಎಂದು ಅವ್ವನ ಬಳಿ ಕಣ್ಣೀರುಗರೆಯುತ್ತಿದ್ದಳು. ಇಂತಹ ಸಂಕಟದ ನಡುವೆಯೂ ಸಿದ್ಧಣ್ಣನಿಲ್ಲದ ಜಗತ್ತು ಬೇಡವೇ ಬೇಡ ಎನ್ನುವಷ್ಟರ ಮಟ್ಟಿಗೆ ಅವಳ ಮನಸ್ಸು